ಅ) ಒಟ್ಟಾರೆ ಅನುದಾನಕ್ಕೆ ಮೀರಿ ವೆಚ್ಚವಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

5009 (5994) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) :- ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿರಹಟ್ಟಿ ತಾಲ್ಲೂಕಿನಲ್ಲಿ ಚೌಡಿಹಾಳ ಕುಡಿಯುವ ನೀರಿನ ಯೋಜನೆ ಯಾವಾಗ ಮಂಜೂರಾಯಿತು;

ಆ) ಈ ಯೋಜನೆಗೆ ಯಾವಾಗ ಅಡಿಗಲ್ಲು ಹಾಕಲಾಯಿತು;

ಇ) ಈ ಯೋಜನೆಗೆ ಕಾರ್ಯಗತಗೊಳಿಸಲು ಯಾವ ಏಜೆನ್ಸಿಗೆ ವಹಿಸಲಾಗಿದೆ;

ಈ) ಈ ಏಜೆನ್ಸಿಯು ಈ ಯೋಜನೆಯಲ್ಲಿ ಇಲ್ಲಿಯವರೆಗೆ ನಿರ್ವಹಿಸಿದ ಕೆಲಸದ ವಿವರ ನೀಡುವುದು;

ಉ) ಈ ಯೋಜನೆಗಾಗಿ ಇಲ್ಲಿಯವರೆಗೆ ವಿನಿಯೋಗಿಸಿದ ಹಣದ ವಿವರ ನೀಡುವುದು;

ಊ) ಈ ಯೋಜನೆ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವದಿ ಎಷ್ಟು;

ಬಿ. ಸತ್ಯನಾರಾಯಣ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. :

ಅ) ದಿನಾಂಕ 4-3-2002ರಲ್ಲಿ ಮಂಜೂರಾಗಿರುತ್ತದೆ.

ಆ) 2002ನೇ ಇಸವಿಯಲ್ಲಿ ಅಡಿಗಲ್ಲನ್ನು ಹಾಕಲಾಯಿತು.

ಇ) ಮೆ : ಕರ್ನಾಟಕ ಭೂ ಸೇನಾ ನಿಗಮ, ಗದಗ ಇವರಿಗೆ ವಹಿಸಲಾಗಿದೆ.

ಈ) ಈ ಏಜೆನ್ಸಿಯು ಕನಕವಾಡಿ ಗ್ರಾಮದಲ್ಲಿ OHT ಹೆಬ್ಬಾಳ ಗ್ರಾಮದಲ್ಲಿ ಪಂಪ್ ಮತ್ತು ಚೌಡಿಹಾಳ ಗ್ರಾಮದಲ್ಲಿ OHT ಮತ್ತು ವಿತರಣಾ ಕೊಳವೆಗಳನ್ನು ಅಳವಡಿಸಿದೆ ಹಾಗೂ ಹೆಬ್ಬಾಳದವರೆಗಿನ ಏರು ಕೊಳವೆ ಮಾರ್ಗಗಳನ್ನು ಪೂರ್ಣಗೊಳಿಸಲಾಗಿದೆ.

ಉ) ಈ ಯೋಜನೆಯು ರೂ. 85.23 ಲಕ್ಷಗಳಿಗೆ ಮಂಜೂರಾಗಿದ್ದು, ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನ ರೂ. 77.43 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಊ) ಈ ಯೋಜನೆ ಪೂರ್ಣಗೊಳಿಸಲು 18 ತಿಂಗಳ ಕಾಲಾವದಿ ನಿಗದಿಪಡಿಸಲಾಗಿದೆ.

5010(5900) ಶ್ರೀ ಮತಿ/ಶ್ರೀ ಗೋವಿಂದ್. ಎಂ. ಕಾರಜೋಳ್(ಮುಧೋಳ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ/ಜಿಲ್ಲಾ ಆಸ್ಪತ್ರೆ ಮತ್ತು ಸರ್ಕಾರದ ಸ್ವಾಮ್ಯದ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ ಮಂಜೂರಾದ ಒಟ್ಟು ವೈದ್ಯರುಗಳ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ವೈದ್ಯರ ಹುದ್ದೆಗಳೆಷ್ಟು;

ಈ) ಖಾಲಿ ಇರುವ ಹುದ್ದೆಗೆ ನೇಮಕಾತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ನೇಮಕವಾದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಜನಾಂಗದವರ ಸಂಖ್ಯೆ ಎಷ್ಟು?

ಶ್ರೀ ಎನ್. ಚಲುವರಾಯಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ / ಜಿಲ್ಲಾ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರ ಸಂಖ್ಯೆ : 4538

ಸರ್ಕಾರದ ಸ್ವಾಮ್ಯದ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳ ಸಂಖ್ಯೆ :60

ಆ) ರಾಜ್ಯದಲ್ಲಿ ಮಂಜೂರಾದ ಒಟ್ಟು ವೈದ್ಯರುಗಳ ಸಂಖ್ಯೆ:5,069.

ಇ) ಖಾಲಿ ಇರುವ ವೈದ್ಯರ ಸಂಖ್ಯೆ : 531.

ಈ) ಜಿಲ್ಲಾ/ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞರು/ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಕಾಲಕಾಲಕ್ಕೆ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಹಾಗೂ ಖಾಸಗಿ ವೈದ್ಯರನ್ನು ಸಂದರ್ಶಕ ವೈದ್ಯರನ್ನಾಗಿ ಮತ್ತು ನಿವೃತ್ತ ವೈದ್ಯರನ್ನು ನಿಗಧಿತ ವೇತನದಲ್ಲಿ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಅಲ್ಲದೆ ದಿನಾಂಕ :18/05/2005ರಂದು ರಾಜ್ಯಮಟ್ಟದಲ್ಲಿ (Walk in Interview)ಮೂಲಕ ಸುಮಾರು 122 ತಜ್ಞ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದೆ ಹಾಗೂ ರಾಜ್ಯಮಟ್ಟದಲ್ಲಿ ಗುತ್ತಿಗೆ ಆಧಾರದ ಮೇಲೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ನೇಮಕ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಉ) ನೇಮಕವಾದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ : 523, ಪರಿಶಿಷ್ಟ ಪಂಗಡ: 98 (1391) ಗುತ್ತಿಗೆ ವೈದ್ಯರನ್ನು ಹೊರತುಪಡಿಸಿ)

5011 (5132) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್ ಕಾಮಗಾರಿಗಳನ್ನು ಪ್ರಾರಂಭಿಸುವ ಮೊದಲು ಮತ್ತು ಕಾಮಗಾರಿ ಮುಕ್ತಾಯದ ನಂತರ ಸಂಬಂಧಪಟ್ಟ ಇಂಜಿನಿಯರಿಂಗ್ ವಿಭಾಗದವರು ಆಯಾ ಕ್ಷೇತ್ರದ ಶಾಸಕರಿಗೆ ಕಾಮಗಾರಿಗಳ ಮಾಹಿತಿ ಒದಗಿಸಲು ಸರ್ಕಾರ ಆಯಾ ಇಲಾಖೆಗಳಿಗೆ ನಿರ್ದೇಶನ ನೀಡಿದೆಯೇ; (ನೀಡಿದಲ್ಲಿ, ಅದರ ಪ್ರತಿ ಒದಗಿಸುವುದು);

ಆ) ಕಾಮಗಾರಿಗಳನ್ನು ಅನುಷ್ಠಾ ಮಾಡುವಾಗ ಶಾಸಕರ ಗಮನಕ್ಕೆ ಬಾರದೇ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;

ಇ) ಕಾಮಗಾರಿಯು ಪಾರದರ್ಶಕತೆಯಿಂದ ನಡೆಯುವ ಕಾಮಗಾರಿಗಳು ಜರುಗುವ ಸ್ಥಳದಲ್ಲಿ ವಿವರವುಳ್ಳ ನಾಮಫಲಕವನ್ನು ಹಾಕಲು ವ್ಯವಸ್ಥೆ ಮಾಡಲಾಗುವುದೇ?

ಡಾ. ಹೆಚ್. ಸಿ. ಮಹದೇವಪ್ಪ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು. :